# ಮತ್ತೊಮ್ಮೆ ಭೇಟಿ ನೀಡಬೇಕೆನಿಸುವ ಹಂಪಿ

ಹಂಪಿಯಲ್ಲಿ ನಿಮ್ಮನ್ನು ಮಂತ್ರಮುಗ್ಧಗೊಳಿಸುವ ಯಾವುದೋ ಅವ್ಯಕ್ತ ಆಕರ್ಷಣೆಯಿದೆ. ಅಂತೆಯೇ ಏನೋ ಎಷ್ಟು ಬಾರಿ ಸಂದರ್ಶಿಸಿದರೂ, ಈ ಸ್ಥಳ ನಿಮ್ಮನ್ನು ಮತ್ತೊಮ್ಮೆ ಭೇಟಿ ನೀಡುವಂತೆ ಪ್ರೇರೇಪಿಸುತ್ತದೆ. ಈ ನಗರ ಹಲವಾರು ರೋಚಕ ಕತೆಗಳ ಆಗರ : ಅವುಗಳಲ್ಲಿ ಕೆಲವು ಕಾಲಗರ್ಭದಲ್ಲಿ ಅಡಗಿದ್ದರೆ, ಇನ್ನಲವು ಈ ಸ್ಥಳದ ಖ್ಯಾತಿಯನ್ನು ಕೀರ್ತಿಶಿಖರಕ್ಕೇರಿಸಿವೆ. ಈ ಸ್ಥಳಕ್ಕೆ ನೀಡಿದ ಪ್ರತಿ ಭೇಟಿಯಲ್ಲೂ ನೀವು ಹೊಸ ವಿಷಯವೊಂದನ್ನು ತಿಳಿದುಕೊಳ್ಳುವಿರಿ. ಇನ್ನೇಕೆ ತಡ. ಒಂದೊಮ್ಮೆ, ರೋಮ್ ನಗರಕ್ಕಿಂತ ದೊಡ್ಡದಾಗಿತ್ತೆಂಬ ಖ್ಯಾತಿ ಪಡೆದಿದ್ದ ಈ ವಿಸ್ಮಯ ವಿಶ್ವ ಪರಂಪರಾ ತಾಣ, ಹಂಪಿಗೆ ಇಂದೇ ಭೇಟಿ ನೀಡಿ, ನಿಧಾನವಾಗಿ ನಿಮ್ಮನ್ನು ಆವರಿಸಿಕೊಳ್ಳುವ ಹಂಪಿಯ ಆಕರ್ಷಣೆಯ ಅನುಭೂತಿಯನ್ನು ಸ್ವತ: ನೀವೇ ಅನುಭವಿಸುವಿರಿ.



STARK.Blr




ಹತ್ತಿರದ ವಿಮಾನನಿಲ್ದಾಣ:
ಹುಬ್ಬಳ್ಳಿ

ಹತ್ತಿರದ ರೈಲ್ವೇನಿಲ್ದಾಣ:
ಹೊಸಪೇಟೆ

ಹತ್ತಿರದ ಹೆದ್ದಾರಿಗಳು:
ಎನ್‌ಹೆಚ್ – 13, 63

ಕರ್ನಾಟಕ, ದಕ್ಷಿಣ ಭಾರತ

Follow us on:

ಕರ್ನಾಟಕ ಸರ್ಕಾರ

ಕರ್ನಾಟಕ
ಒಂದು ರಾಜ್ಯ. ಹಲವು ಜಗತ್ತುಗಳು.
ಪ್ರವಾಸೋದ್ಯಮ ಇಲಾಖೆ